**National**
**Kannada**
**03.12.2024 / 19.35 hrs**
ಆಕಾಶವಾಣಿ, ಬೆಂಗಳೂರು
ರಾಷ್ಟ್ರೀಯ ವಾರ್ತೆಗಳು

ಮುಖ್ಯಾಂಶಗಳು

೧. ಉಭಯ ಸದನಗಳಲ್ಲಿ ಪ್ರತಿಪಕ್ಷಗಳ ಗದ್ದಲದ ನಡುವೆ ಮುಂದುವರಿದ ಪ್ರಶ್ನೋತರ ಕಲಾಪ

೨. ರಾಜ್ಯಸಭೆಯಲ್ಲಿಂದು ತೈಲ ಕ್ಷೇತ್ರ ನಿಯಂತ್ರಣ ಮತ್ತು ತಿದ್ದುಪಡಿ ಮಸೂದೆ ಮಂಡನೆ

೩. ೨೧ ಸಾವಿರದ ೭೭೨ ಕೋಟಿ ರೂಪಾಯಿ ಮೊತ್ತದ ಐದು ಬಂಡವಾಳ ಪ್ರಸ್ತಾವನೆಗೆ ರಕ್ಷಣಾ ಸ್ವಾಧೀನ ಮಂಡಳಿ ಅನುಮೋದನೆ

೪. ಕಿರಿಯರ ಏಷ್ಯಾಕಪ್ ಹಾಕಿ ಪಂದ್ಯಾವಳಿ; ಸೆಮಿಫೈನಲ್ ಪಂದ್ಯದಲ್ಲಿ ಇಂದು ಭಾರತ-ಮಲೇಷಿಯಾ ಮುಖಾಮುಖಿ

**<><*<><>*><>**

ಈ ಯೋಜನೆಗೆ ಈ ವರ್ಷ ಸರ್ಕಾರದಿಂದ ೮೬ ಸಾವಿರ ಕೋಟಿ ರೂಪಾಯಿಗಳನ್ನು ಬಜೆಟ್‌ನಲ್ಲಿ ಮೀಸಲಿಡಲಾಗಿದೆ. ಯುಪಿಎ ಸರ್ಕಾರ ೨೦೧೩-೧೪ರಲ್ಲಿ ಕೇವಲ ೩೩ ಸಾವಿರ ಕೋಟಿ ರೂಪಾಯಿ ನಿಗದಿಪಡಿಸಿತ್ತು ಎಂದು ಸಚಿವರು ಉತ್ತರಿಸಿದರು. ರಾಜ್ಯಗಳಿಗೆ ಯೋಜನೆಯಡಿ ನೀಡಲಾಗುವ ಅನುದಾನವನ್ನು ವಿಳಂಬ ಮಾಡಲಾಗುತ್ತಿದೆ ಎಂಬ ಆರೋಪವನ್ನು ತಳ್ಳಿಹಾಕಿದ ಸಚಿವರು, ಯಾವುದೇ ರಾಜ್ಯವು, ಕೇಂದ್ರ ಸರ್ಕಾರ ಸಾಕಷ್ಟು ಅನುದಾನ ನೀಡುತ್ತಿಲ್ಲ ಎಂದು ಭಾವಿಸಿದರೆ, ರಾಜ್ಯಗಳೇ ನಿಧಿಯನ್ನು ಒದಗಿಸಿಕೊಳ್ಳಬಹುದು ಎಂದು ತಿಳಿಸಿದರು. ಪ್ರತಿ ವರ್ಷ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಗೆ ಅನುದಾನವನ್ನು ತಗ್ಗಿಸಲಾಗುತ್ತಿದೆ. ಯೋಜನೆ ನಿರ್ಣಾಯಕವಾಗಿದ್ದರೂ ಉದ್ಯೋಗ ಕಾರ್ಡ್‌ಗಳನ್ನು ರದ್ದುಪಡಿಸಲಾಗುತ್ತಿದೆ ಎಂಬ ಸಂಸದ ಶಶಿಕಾಂತ್ ಸೆಂಥಿಲ್ ಅವರ ಆರೋಪಕ್ಕೆ ಪ್ರತಿಕ್ರಿಯಿಸಿದ ಸಚಿವರು, ಉದ್ಯೋಗ ಕಾರ್ಡ್ ರದ್ದುಪಡಿಸುವುದು ರಾಜ್ಯ ಸರ್ಕಾರದ ಕೆಲಸವಾಗಿದೆ. ಇದರಲ್ಲಿ ಕೇಂದ್ರ ಸರ್ಕಾರದ ಯಾವುದೇ ಪಾತ್ರ ಇಲ್ಲ ಎಂದು ಸ್ಪಷ್ಟಪಡಿಸಿದರು. ರಕ್ಷಣಾ ಸ್ವಾಧೀನ ಮಂಡಳಿಯು ೨೧ ಸಾವಿರದ ೭೭೨ ಕೋಟಿ ರೂಪಾಯಿಗಳ ಮೊತ್ತದ ಐದು ಬಂಡವಾಳ ಸ್ವಾಧೀನ ಪ್ರಸ್ತಾವನೆಗಳನ್ನು ಅನುಮೋದಿಸಿದೆ.

ನವದೆಹಲಿಯಲ್ಲಿ ರಕ್ಷಣಾ ಸಚಿವ ರಾಜನಾಥ್ ಸಿಂಗ್ ಅವರ ಅಧ್ಯಕ್ಷತೆಯಲ್ಲಿ ಇಂದು ರಕ್ಷಣಾ ಸ್ವಾಧೀನ ಮಂಡಳಿಯು, ಭಾರತೀಯ ನೌಕಾಪಡೆಗೆ ೩೧ ಹೊಸ ವಾಟರ್ ಜೆಟ್ ಫಾಸ್ಟ್ ಅಟ್ಯಾಕ್

ಕ್ರಾಫ್ಟ್‌ಗಳ ಖರೀದಿಗೆ ಅನುಮೋದನೆ ನೀಡಿತು. ಕಡಿಮೆ ತೀವ್ರತೆಯ ಕಡಲ ಕಾರ್ಯಾಚರಣೆಗಳು, ಕಣ್ಗಾವಲು, ಗಸ್ತು ಮತ್ತು ಕರಾವಳಿಯ ಸಮೀಪದಲ್ಲಿ ಶೋಧ ಮತ್ತು ಪಾರುಗಾಣಿಕಾ ಕಾರ್ಯಾಚರಣೆಗಳ ಕಾರ್ಯವನ್ನು ನಿರ್ವಹಿಸಲು ಇವುಗಳನ್ನು ವಿನ್ಯಾಸಗೊಳಿಸಲಾಗಿದೆ ಎಂದು ರಕ್ಷಣಾ ಸಚಿವಾಲಯ ತಿಳಿಸಿದೆ.

ಇದೇ ವೇಳೆ ೧೨೦ ಫಾಸ್ಟ್ ಇಂಟರ್‌ಸೆಪ್ಟರ್ ಕ್ರಾಫ್ಟ್‌ಗಳ ಖರೀದಿಗೆ ಮಂಡಳಿಯು ಅನುಮೋದನೆ ನೀಡಿದೆ. ಅಲ್ಲದೇ, ಕರಾವಳಿ ಪ್ರದೇಶಗಳಲ್ಲಿ ಕರಾವಳಿ ಭದ್ರತೆ ಮತ್ತು ಕಣ್ಗಾವಲು ಬಲಪಡಿಸಲು ಭಾರತೀಯ ಕರಾವಳಿ ಪಡೆಗಳಿಗೆ ಆರು ಸುಧಾರಿತ ಲಘು ಹೆಲಿಕಾಪ್ಟರ್‌ಗಳ ಖರೀದಿಗೆ ಅಂಗೀಕಾರವನ್ನು ನೀಡಲಾಗಿದೆ.

<><*<><>*><>

೨೦೨೦ರ ಗಾಲ್ವಾನ್ ಕಣಿವೆ ವಿವಾದದ ನಂತರ ಹದಗೆಟ್ಟಿದ್ದ ಭಾರತ-ಚೀನಾ ಸಂಬಂಧಗಳು ನಿರಂತರ ರಾಜತಾಂತ್ರಿಕ ಮಾತುಕತೆಗಳಿಂದಾಗಿ ಸುಧಾರಿಸುತ್ತಿದೆ ಎಂದು ವಿದೇಶಾಂಗ ವ್ಯವಹಾರಗಳ ಸಚಿವ ಡಾ. ಎಸ್.ಜೈಶಂಕರ್ ಲೋಕಸಭೆಗಿಂದು ತಿಳಿಸಿದ್ದಾರೆ. ೨೦೨೦ರಲ್ಲಿ ಗಾಲ್ವಾನ್ ಕಣಿವೆಯಲ್ಲಿ ನಡೆದ ಹಿಂಸಾತ್ಮಕ ಘರ್ಷಣೆಗೆ ಕಾರಣವಾದ ಸನ್ನಿವೇಶಗಳ ಬಗ್ಗೆ ಸದನಕ್ಕೆ ಮಾಹಿತಿ ಇದೆ. ನಂತರ ತಿಂಗಳಲ್ಲಿ ನಿಯಂತ್ರಣ ರೇಖೆಯ ಸಮೀಪದಲ್ಲಿ ಭಾರಿ ಶಸ್ತ್ರಾಸ್ತ್ರಗಳನ್ನು ನಿಯೋಜಿಸಲು ಸಾಕಷ್ಟು ಗಂಭೀರವಾದ ಘಟನೆಗಳು ಸಹ ನಡೆದಿದ್ದವು ಎಂದರು. ಎರಡೂ ದೇಶಗಳ ಗಡಿಯಲ್ಲಿ ಉತ್ತುಂಗಕ್ಕೇರಿದ ಉದ್ವಿಗ್ನತೆಯನ್ನು ತಗ್ಗಿಸಲು, ಶಾಂತಿ ಮತ್ತು ನೆಮ್ಮದಿಯನ್ನು ಪುನಸ್ಥಾಪಿಸಲು ರಾಜತಾಂತ್ರಿಕ ಪ್ರಯತ್ನದ ಅನಿವಾರ್ಯತೆಯೂ ಸಹ ಇತ್ತು ಎಂದು ಸಚಿವರು ವಿವರಿಸಿದ್ದಾರೆ. ಭಾರತ ಮತ್ತು ಚೀನಾ ಗಡಿ ಸಮಸ್ಯೆಯನ್ನು ಪರಿಹರಿಸಲು ಹಲವು ದಶಕಗಳಿಂದ ಮಾತುಕತೆ ನಡೆಸಿವೆ. ಗಡಿ ಇತ್ಯರ್ಥಕ್ಕಾಗಿ ಪರಸ್ಪರ ಸ್ವೀಕಾರ್ಹ ಚೌಕಟ್ಟು ತಲುಪಲು ದ್ವಿಪಕ್ಷೀಯ ಚರ್ಚೆಗಳ ಮೂಲಕ ಚೀನಾದೊಂದಿಗೆ ತೊಡಗಿಸಿಕೊಳ್ಳಲು ನಾವು ಬದ್ಧರಾಗಿದ್ದೇವೆ ಎಂದು ಹೇಳಿದರು.

<><*<><>*><>

ಭಾರತವು, ಚೀನಾವನ್ನು ಮೀರಿಸಿ ವಿಶ್ವದ ಅತಿ ದೊಡ್ಡ ದ್ವಿಚಕ್ರ ವಾಹನ ಮಾರುಕಟ್ಟೆಯಾಗಿದೆ ಎಂದು ಕೇಂದ್ರ ಬೃಹತ್ ಕೈಗಾರಿಕಾ ಸಚಿವ ಎಚ್.ಡಿ.ಕುಮಾರಸ್ವಾಮಿ ಹೇಳಿದ್ದಾರೆ. ಲೋಕಸಭೆಗೆ ನೀಡಿದ ಲಿಖಿತ ಉತ್ತರದಲ್ಲಿ ಅವರು, ೨೦೨೩ರಲ್ಲಿ ಚೀನಾದಲ್ಲಿ ೧ ಕೋಟಿ ೬೬ ಲಕ್ಷ ದ್ವಿಚಕ್ರ ವಾಹನಗಳು ಮಾರಾಟವಾಗಿವೆ. ಆದರೆ, ಭಾರತದಲ್ಲಿ ೧ ಕೋಟಿ ೭ ಲಕ್ಷಕ್ಕಿಂತ ಹೆಚ್ಚು ದ್ವಿಚಕ್ರ ವಾಹನಗಳನ್ನು ನೋಂದಾಯಿಸಲಾಗಿದೆ ಎಂದು ಹೇಳಿದ್ದಾರೆ. ೨೦೨೩-೨೪ರ ಹಣಕಾಸು ವರ್ಷದಲ್ಲಿ ದೇಶದಲ್ಲಿ ಸುಮಾರು ೯ ಲಕ್ಷದ ೫೦ ಸಾವಿರ ಎಲೆಕ್ಟ್ರಿಕ್ ದ್ವಿಚಕ್ರ ವಾಹನಗಳನ್ನು ತಯಾರಿಸಲಾಗಿದೆ. ಕಳೆದ ಹಣಕಾಸು ವರ್ಷದಲ್ಲಿ ದೇಶದಲ್ಲಿ ೯೨ ಸಾವಿರಕ್ಕೂ ಹೆಚ್ಚು ಎಲೆಕ್ಟ್ರಿಕ್ ಪ್ರಯಾಣಿಕ ವಾಹನಗಳು ಮತ್ತು ಸುಮಾರು ೬ ಲಕ್ಷದ ೩೩ ಸಾವಿರ ತ್ರಿಚಕ್ರ ವಾಹನಗಳನ್ನು ತಯಾರಿಸಲಾಗಿದೆ ಎಂದು ಸಚಿವ ಎಚ್.ಡಿ.ಕುಮಾರಸ್ವಾಮಿ ತಿಳಿಸಿದ್ದಾರೆ.

<><*<><>*><>

ರಾಜ್ಯಸಭೆಯಲ್ಲಿಂದು ವಿವಿಧ ಸಮಿತಿಗಳ ಸದಸ್ಯರು ವರದಿಗಳು ಮತ್ತು ಕಾಗದಪತ್ರಗಳನ್ನು ಮಂಡಿಸುವ ಮೂಲಕ ಕಲಾಪ ಆರಂಭಿಸಲಾಯಿತು. ಸದಸ್ಯರಿಂದ ನಿಯಮ ೨೬೭ರಡಿ ೪೨ ನೋಟೀಸ್‌ಗಳು ತಮಗೆ ಬಂದಿರುವುದಾಗಿ ಆಮ್ ಆದ್ಮಿ ಪಕ್ಷದ ಸದಸ್ಯ ರಾಘವ್ ಚಡ್ಡಾ ೨೬೭ರಡಿ ಸಲ್ಲಿಸಿರುವ ನೋಟೀಸ್ ಅನ್ನು ಬಹಿರಂಗಪಡಿಸಿರುವುದನ್ನು ಸಭಾಪತಿ ಜಗದೀಪ್ ಧನ್‌ಕರ್ ಖಂಡಿಸಿದರು. ನೋಟೀಸ್ ಅನ್ನು ಸಾರ್ವಜನಿಕವಾಗಿ ಹಂಚಿಕೊಳ್ಳುವುದು ನಿಬಂಧನೆಗಳನ್ನು ಉಲ್ಲಂಘಿಸುವುದಾಗಿದೆ ಎಂದು ಅವರು ಅಸಮಾಧಾನ ವ್ಯಕ್ತಪಡಿಸಿದರು.

ಇದೊಂದು ಗಂಭೀರ ವಿಚಾರವಾಗಿದ್ದು, ಈ ಕುರಿತಂತೆ ಕೈಗೊಳ್ಳಬೇಕಾದ ಕ್ರಮಗಳ ಕುರಿತು ನಾಯಕರೊಂದಿಗೆ ಚರ್ಚಿಸುವುದಾಗಿ ಹೇಳಿದರು. ಹಲವು ನೋಟೀಸ್‌ಗಳನ್ನು ನೀಡಿರುವ ಸಮಾಜವಾದಿ ಪಕ್ಷದ ರಾಮಗೋಪಾಲ್ ಯಾದವ್ ಅವರನ್ನು ಯಾವ ನೋಟೀಸ್ ಅನ್ನು ಚರ್ಚಿಸಲು ಬಯಸುತ್ತೀರಿ ಎಂದು ಸಭಾಪತಿ ಪ್ರಶ್ನಿಸಿದಾಗ ಅವರು ಸಂಭಾಲ್ ವಿವಾದವನ್ನು ಪ್ರಸ್ತಾಪಿಸುವುದಾಗಿ ಉತ್ತರಿಸಿದರು. ಇದಕ್ಕೆ ಶೂನ್ಯವೇಳೆಯಲ್ಲಿ ಅವಕಾಶ ನೀಡುವುದಾಗಿ ಸಭಾಪತಿ ಭರವಸೆ ನೀಡಿದರು.

<><*<><>*><>

ತೈಲ ಕ್ಷೇತ್ರ ನಿಯಂತ್ರಣ ಮತ್ತು ತಿದ್ದುಪಡಿ ಮಸೂದೆಯನ್ನು ರಾಜ್ಯಸಭೆಯಲ್ಲಿ ಇಂದು ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ ಖಾತೆ ಸಚಿವ ಹರ್ದೀಪ್‌ಸಿಂಗ್ ಪುರಿ ಮಂಡಿಸಿದರು. ಈ ಮಸೂದೆಯು ಖನಿಜ ತೈಲಗಳನ್ನು ಮರುವಾಖ್ಯಾನಿಸುತ್ತದೆ. ಖನಿಜ ತೈಲಗಳಲ್ಲಿ ಕಲ್ಲಿದ್ದಲು, ಲಿಗ್ನೈಟ್, ಹೀಲಿಯಂ ಒಳಗೊಂಡಿರುವುದಿಲ್ಲ. ಈ ಮಸೂದೆಯು, ತೈಲ ಮತ್ತು ಅನಿಲ ವಲಯದಲ್ಲಿ ವ್ಯವಹಾರವನ್ನು ಸಲುಭಗೊಳಿಸುತ್ತದೆ. ಜೈಲು ಶಿಕ್ಷೆಯನ್ನು ರದ್ದುಪಡಿಸಿ, ಹೆಚ್ಚಿನ ದಂಡವನ್ನು ವಿಧಿಸಲಿದೆ ಎಂದು ಸಚಿವ ಹರ್ದೀಪ್‌ಸಿಂಗ್ ಪುರಿ ಹೇಳಿದರು.

<><*<><>*><>

ರಕ್ಷಣಾ ಸ್ವಾಧೀನ ಮಂಡಳಿಯು ೨೧ ಸಾವಿರದ ೭೭೨ ಕೋಟಿ ರೂಪಾಯಿಗಳ ಮೊತ್ತದ ಐದು ಬಂಡವಾಳ ಸ್ವಾಧೀನ ಪ್ರಸ್ತಾವನೆಗಳನ್ನು ಅನುಮೋದಿಸಿದೆ. ನವದೆಹಲಿಯಲ್ಲಿ ರಕ್ಷಣಾ ಸಚಿವ ರಾಜನಾಥ್ ಸಿಂಗ್ ಅವರ ಅಧ್ಯಕ್ಷತೆಯಲ್ಲಿ ಇಂದು ರಕ್ಷಣಾ ಸ್ವಾಧೀನ ಮಂಡಳಿಯು, ಭಾರತೀಯ ನೌಕಾಪಡೆಗೆ ೩೧ ಹೊಸ ವಾಟರ್ ಜೆಟ್ ಫಾಸ್ಟ್ ಅಟ್ಯಾಕ್ ಕ್ರಾಫ್ಟ್‌ಗಳ ಖರೀದಿಗೆ ಅನುಮೋದನೆ ನೀಡಿತು. ಕಡಿಮೆ ತೀವ್ರತೆಯ ಕಡಲ ಕಾರ್ಯಾಚರಣೆಗಳು, ಕಣ್ಗಾವಲು, ಗಸ್ತು ಮತ್ತು ಕರಾವಳಿಯ ಸಮೀಪದಲ್ಲಿ ಶೋಧ ಮತ್ತು ಪಾರುಗಾಣಿಕಾ ಕಾರ್ಯಾಚರಣೆಗಳ ಕಾರ್ಯವನ್ನು ನಿರ್ವಹಿಸಲು ಇವುಗಳನ್ನು ವಿನ್ಯಾಸಗೊಳಿಸಲಾಗಿದೆ ಎಂದು ರಕ್ಷಣಾ ಸಚಿವಾಲಯ ತಿಳಿಸಿದೆ. ಇದೇ ವೇಳೆ ೧೨೦ ಫಾಸ್ಟ್ ಇಂಟರ್‌ಸೆಪ್ಟರ್ ಕ್ರಾಫ್ಟ್‌ಗಳ ಖರೀದಿಗೆ ಮಂಡಳಿಯು ಅನುಮೋದನೆ ನೀಡಿದೆ. ಅಲ್ಲದೇ, ಕರಾವಳಿ ಪ್ರದೇಶಗಳಲ್ಲಿ ಕರಾವಳಿ ಭದ್ರತೆ ಮತ್ತು ಕಣ್ಗಾವಲು ಬಲಪಡಿಸಲು ಭಾರತೀಯ ಕರಾವಳಿ ಪಡೆಗಳಿಗೆ ಆರು ಸುಧಾರಿತ ಲಘು ಹೆಲಿಕಾಪ್ಟರ್‌ಗಳ ಖರೀದಿಗೆ ಅಂಗೀಕಾರವನ್ನು ನೀಡಲಾಗಿದೆ.

<><*<><>*><>

ಪ್ರಮುಖ ಕೈಗಾರಿಕೋದ್ಯಮಯೊಬ್ಬರ ವಿರುದ್ಧ ಕೇಳಿ ಬಂದಿರುವ ಭ್ರಷ್ಟಾಚಾರ ಕುರಿತಂತೆ ಸಂಸತ್ ಭವನದ ಹೊರಗೆ ಪ್ರತಿಪಕ್ಷಗಳ ಹಲವು ಸದಸ್ಯರು ಇಂದು ಪ್ರತಿಭಟನೆ ನಡೆಸಿದ್ದು, ಜಂಟಿ ಸಂಸದೀಯ ತನಿಖೆ ನಡೆಸಬೇಕು ಎಂದು ಆಗ್ರಹಿಸಿದರು. ಲೋಕಸಭೆಯ ಪ್ರತಿಪಕ್ಷ ನಾಯಕ ರಾಹುಲ್ ಗಾಂಧಿ, ಎಎಪಿ ಯ ಸಂಜಯ್ ಸಿಂಗ್, ಖಎಆ ಯ ಮಿಸಾ ಭಾರತಿ, ಶಿವಸೇನೆ ಉದ್ಧವ್ ಠಾಕ್ರೆ ಬಣದ ಅರವಿಂದ್ ಸಾವಂತ್ ಸೇರಿದಂತೆ ಪ್ರತಿಪಕ್ಷಗಳ ಸದಸ್ಯರು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.

<><*<><>*><>

ವಿಶೇಷಚೇತನರಿಗೆ ಪ್ರವೇಶ, ಸಮಾನತೆ ಮತ್ತು ಅವಕಾಶವನ್ನು ಹೆಚ್ಚಿಸುವ ಸರ್ಕಾರದ ಬದ್ಧತೆಯನ್ನು ಪ್ರಧಾನಿ ನರೇಂದ್ರ ಮೋದಿ ಇಂದು ಪುನರುಚ್ಚರಿಸಿದ್ದಾರೆ. 'ಸುಗಮ್ಯ ಭಾರತ ಅಭಿಯಾನ'ಕ್ಕೆ ಒಂಬತ್ತು ವರ್ಷ ಪೂರ್ಣಗೊಂಡಿರುವ ಸಂದರ್ಭದಲ್ಲಿ, ಸಾಮಾಜಿಕ ಮಾಧ್ಯಮ ಪೋಸ್ಟ್‌ನಲ್ಲಿ, ಪ್ರಧಾನಿ ಅವರು, ಪ್ಯಾರಾಲಿಂಪಿಕ್ಸ್‌ನಲ್ಲಿ ಭಾರತದ ಯಶಸ್ಸನ್ನು ಉಲ್ಲೇಖಿಸಿದ್ದು, ವಿಶೇಷಚೇತನ ಸಹೋದರ, ಸಹೋದರಿಯರ ಸ್ಥೈರ್ಯ ಮತ್ತು ಸಾಧನೆಗಳು ಇಡೀ ರಾಷ್ಟ್ರವನ್ನು ಹೆಮ್ಮೆಪಡುವಂತೆ ಮಾಡಿತು ಎಂದು ಶ್ಲಾಘಿಸಿದ್ದಾರೆ.  ೨೦೧೬ ರ ವಿಶೇಷಚೇತನರ ಹಕ್ಕುಗಳ ಕಾಯ್ದೆ, ವಿಶೇಷಚೇತನರ ಸಬಲೀಕರಣಕ್ಕೆ ಸರ್ಕಾರದ ಬದ್ಧತೆಯನ್ನು ಸೂಚಿಸುತ್ತದೆ ಎಂದು ಪ್ರಧಾನಿ ನರೇಂದ್ರ ಮೋದಿ ತಿಳಿಸಿದ್ದಾರೆ.

<><*<><>*><>

ಒಮನ್‌ನ ಮಸ್ಕತ್‌ನಲ್ಲಿ ನಡೆಯುತ್ತಿರುವ ಕಿರಿಯರ ಏಷ್ಯಾಕಪ್ ಹಾಕಿ ಟೂರ್ನಿಯ ಸೆಮಿಫೈನಲ್ ಪಂದ್ಯದಲ್ಲಿ ಇಂದು ಭಾರತ ತಂಡ, ಮಲೇಷಿಯಾ ತಂಡವನ್ನು ಎದುರಿಸಲಿದೆ. ಪಂದ್ಯ ಭಾರತೀಯ ಕಾಲಮಾನ ರಾತ್ರಿ ೮.೩೦ಕ್ಕೆ ಆರಂಭವಾಗಲಿದೆ.

<><*<><>*><>

ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆಯಾದ ಇಸ್ರೋ ನಾಳೆ ಸಂಜೆ ೪ ಗಂಟೆ ೮ ನಿಮಿಷಕ್ಕೆ ಶ್ರೀಹರಿಕೋಟಾದ ಸತೀಶ್ ಧವನ್ ಬಾಹ್ಯಾಕಾಶ ಕೇಂದ್ರದಿಂದ PSLV-C59 ಉಡಾವಣಾ ವಾಹಕದೊಂದಿಗೆ Proba 3 ಉಪಗ್ರಹಗಳನ್ನು ಉಡಾವಣೆ ಮಾಡಲಿದೆ. PSLV-C59, ಯುರೋಪಿನ ಬಾಹ್ಯಾಕಾಶ ಸಂಸ್ಥೆಯ ಪ್ರೋಬಾ ೩ ಉಪಗ್ರಹಗಳನ್ನು ಅತ್ಯಂತ ದೀರ್ಘ ಕಕ್ಷೆಗೆ ಉಡಾವಣೆ ಮಾಡಲಿದೆ.  ಪ್ರೋಬಾ ೩ ಉಪಗ್ರಹಗಳು ಕಕ್ಷೆಯನ್ನು ತಲುಪಿದ ನಂತರ ಎರಡು ಭಾಗಗಳಾಗಿ ವಿಭಜನೆಯಾಗುತ್ತವೆ. ಉಪಗ್ರಹಗಳು ಸೂರ್ಯನ ಕರೋನಾ, ಅದರ ಸುತ್ತಲಿನ ವಾತಾವರಣ, ಬಾಹ್ಯಾಕಾಶ ಹವಾಮಾನ ಮತ್ತು ಸೌರ ಮಾರುತವನ್ನು ಅಧ್ಯಯನ ಮಾಡಲಿವೆ.

<><*<><>*><>

ಪಳೆಯುಳಿಕೆ ಇಂಧನಗಳಿಗೆ ಪರ್ಯಾಯವಾಗಿ ಎಥೆನಾಲ್ ಮತ್ತು ಮೆಥೆನಾಲ್‌ನಂತಹ ಜೈವಿಕ ಇಂಧನಗಳನ್ನು ಬಳಸುವುದರಿಂದ ಮಾಲಿನ್ಯಮಟ್ಟ ಕಡಿಮೆಯಾಗಿ, ಕೃಷಿ ಕ್ಷೇತ್ರಕ್ಕೆ ಉತ್ತೇಜನ ದೊರೆಯಲಿದೆ ಹಾಗೂ ಇದು ದೇಶದ ಅಭಿವೃದ್ಧಿಗೆ ಪೂರಕವಾಗಲಿದೆ ಎಂದು ಕೇಂದ್ರ ರಸ್ತೆ ಸಾರಿಗೆ ಮತ್ತು ಹೆದ್ದಾರಿ ಸಚಿವ ನಿತಿನ್ ಗಡ್ಕರಿ ಹೇಳಿದ್ದಾರೆ.

ನವದೆಹಲಿಯಲ್ಲಿಂದು ಇಂಧನ ಪರಿವರ್ತನೆ ಮತ್ತು ಸುಸ್ಥಿರ ರಸ್ತೆ ಸಾರಿಗೆ ಕುರಿತ ೧೮ನೇ ಸಮ್ಮೇಳನವನ್ನು ಉದ್ದೇಶಿಸಿ ಮಾತನಾಡಿದ ಅವರು,  ಭಾರತ, ಸುಮಾರು ೨೨ ಲಕ್ಷ ಕೋಟಿ ಮೌಲ್ಯದ ಪಳೆಯುಳಿಕೆ ಇಂಧನವನ್ನು ಆಮದು ಮಾಡಿಕೊಳ್ಳುತ್ತದೆ. ಇದು ತಗ್ಗಿದರೆ ಆರ್ಥಿಕತೆ ಬಲಗೊಳ್ಳಲಿದೆ ಎಂದರು.  ಮುಂಬರುವ ಐದು ವರ್ಷಗಳಲ್ಲಿ ದೆಹಲಿಯ ಎಲ್ಲಾ ಬಸ್ಸುಗಳು ಎಲೆಕ್ಟ್ರಿಕ್ ಆಗಲಿವೆ ಎಂದು ಸಚಿವ ನಿತಿನ್ ಗಡ್ಕರಿ ವಿಶ್ವಾಸ ವ್ಯಕ್ತಪಡಿಸಿದ್ದಾರೆ.

<><*<> ಇಲ್ಲಿಗೆ ವಾರ್ತಾ ಪ್ರಸಾರ ಮುಕ್ತಾಯವಾಯಿತು <>*><>